**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ., ಮೂಡಿಗೆರೆ.</u>**

**<u>ಸಿ.ಸಿ ನಂಬರ್ಃ 115/2020</u>**

ಪಿರ್ಯಾದಿಃ ಸರ್ಕಾರ, ಪ್ರತಿನಿಧಿಸುವವರು,
ಮೂಡಿಗೆರೆ ಪೊಲೀಸ್ ಠಾಣಾ ಪೋಲೀಸರು.

ವಿರುದ್ದ

ಆರೋಪಿಃ ಸಜ್ಜನ್ ಸಿಂಗ್ ಬಿನ್ ಅಮರ್ ಸಿಂಗ್,
ವಯಸ್ಸು ಸುಮಾರು 42 ವರ್ಷ,
ಶ್ರೀ ಬಾಲಾಜಿ ಬ್ಯಾಂಕರ್ಸ್ ಮತ್ತು ಜ್ಯುವೆಲರ್ಸ್,
ಆರ್.ಟಿ. ರಸ್ತೆ, ಶಿರಾ ಟೌನ್, ತುಮಕೂರು ಜಿಲ್ಲೆ.

**<u>ದೋಷಾರೋಪಣೆ ಸಾರಾಂಶ</u>**

ನಾನು ಶ್ರೀ ಸಚಿನ್.ಡಿ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ, ಆರೋಪಿಯಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆಗಳು ಏನೆಂದರೆಃ-

1. ದಿನಾಂಕಃ 06.11.2019 ರಂದು ಮಧ್ಯಾಹ್ನ 1-30 ರ ಸಮಯದಲ್ಲಿ ಮೂಡಿಗೆರೆ ಪೊಲೀಸ್ ಠಾಣಾ ವ್ಯಾಪ್ತಿಯ ಮೂಡಿಗೆರೆ ಪಟ್ಟಣದ ನೆಹರು ರಸ್ತೆಯಲ್ಲಿರುವ ಚಾಸಾ1 ರವರ ಬಾಬ್ತು ವಾಸದ ಮನೆಯಲ್ಲಿ ಈ ಪ್ರಕರಣದಿಂದ ಪ್ರತ್ಯೇಕಿಸಲ್ಪಟ್ಟ ಆರೋಪಿ ಸಯ್ಯದ್ ಉಮರ್ ಯಾನೆ ನಾರಾಯಿಣಿರವರು ಕಳ್ಳತನ ಮಾಡಿದ್ದ ಆಭರಣಗಳ ಪೈಕಿ 1) 10 ಗ್ರಾಂನ ಚಿನ್ನದ ಬಿಳಿ ಅರಳಿನ ಓಲೆ ಮತ್ತು ಹ್ಯಾಂಗಿಂಗ್ಸ್, 2) 5 ಗ್ರಾಂನ ಚಿನ್ನದ ಮುತ್ತಿನ ಓಲೆ, 3) 5 ಗ್ರಾಂನ ಚಿನ್ನದ ಓಲೆ, 4) 4 ಗ್ರಾಂನ ಚಿನ್ನದ 2 ಕೊಂಡಿಗಳು, 5) 8 ಗ್ರಾಂನ ಚಿನ್ನದ ಜುಮುಕಿ, 6) 4 ಗ್ರಾಂನ ಚಿನ್ನದ ಕೃಷ್ಣ ಡಾಲರ್, 7) 4 ಗ್ರಾಂನ ಚಿನ್ನದ ಲಕ್ಷ್ಮೀ ಡಾಲರ್ ಮತ್ತು 8) 10 ಗ್ರಾಂನ ಚಿನ್ನದ ಲಕ್ಷ್ಮೀ ಪೆಂಡೆಂಟ್‌ಗಳನ್ನು ಆರೋಪಿ ಸಯ್ಯದ್ ಉಮರ್ ಯಾನೆ ನಾರಾಯಣಿಯಿಂದ, ಅವುಗಳು ಅಪ್ರಾಮಾಣಿಕವಾಗಿ ಕಳವು ಮಾಡಿದ್ದೆಂದು ತಿಳಿದೂ ಸಹ ಅಥವಾ ಹಾಗೆಂದು ನಂಬಲು ಕಾರಣವಿದ್ದೂ ಸಹ, ಅವುಗಳನ್ನು ಆರೋಪಿಯಾದ ನೀವು 43,000/- ರೂಗಳಿಗೆ ಖರೀದಿಸಿ ವ್ಯವಹಾರ ನಡೆಸಿ ಚಿನ್ನದ ಆಭರಣಗಳನ್ನು ತನಿಖಾ ಕಾಲದಲ್ಲಿ ಹಾಜರುಪಡಿಸದೇ ವಿಲೇವಾರಿ ಮಾಡಿರುವುದಲ್ಲದೇ, ನಿಮ್ಮ ಜ್ಯುವೆಲ್ಲರ್ಸ್ ಶಾಪ್‌ನಲ್ಲಿ ಅಳವಡಿಸಿದ್ದ ಸಿ.ಸಿ.ಟಿ.ವಿ. ಫೂಟೇಜ್‌ಗಳನ್ನು ತನಿಖೆಯ ಸಂಬಂಧ ಹಾಜರುಪಡಿಸಿರುವುದಿಲ್ಲ. ಈ ರೀತ್ಯಾ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ 411 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

ಪ್ರಃ 1.ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದೆಯಾ? ಅದು ನಿನಗೆ ಅರ್ಥವಾಯಿತೇ ?

ಆರೋಪಿಯ ಉತ್ತರಃ

ಪ್ರಃ 2. ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಆರೋಪಿಯ ಉತ್ತರಃ

(ಆರೋಪಿಗೆ ದಿನಾಂಕಃ09.02.2023 ರಂದು ದೋಷಾರೋಪಣೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ತಿಳಿಸಿ ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ)

Sd/-

ಮೂಡಿಗೆರೆ
ದಿನಾಂಕಃ 09.02.2023.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಮ್.ಎಫ್.ಸಿ., ಮೂಡಿಗೆರೆ.

ಆರೋಪಿಯ ಸಹಿಃ